# ಸಿನಿಮಾ ನೋಡುವ ಖಯಾಲಿ; ಇಷ್ಟಪಡುವ ಪಂಜಾಬಿ ಥಾಲಿ..!

ಸಾಮಾನ್ಯವಾಗಿ ಯಾವುದೇ ದೇಶದಿಂದ ಬೆಂಗಳೂರಿಗೆ ಬಂದ ವಿದೇಶೀಯರಿಗೆ ಇಲ್ಲಿನ ಊಟ ತಿಂಡಿ, ಹವಾಮಾನ, ಜನರ ಸಹಕಾರ ಮೆಚ್ಚುಗೆ ಆಗಿಯೇ ಆಗುತ್ತದೆ. ಓದು, ಉದ್ಯೋಗ ನಿಮಿತ್ತ ಇಲ್ಲಿಗೆ ಬಂದು ಕೆಲವೇ ವರ್ಷಗಳಲ್ಲಿ ಹಿಂತಿರುಗಬೇಕು ಎಂದುಕೊಂಡವರು ಕೂಡ ಮಹಾನಗರದ ಜೀವನಶೈಲಿಗೆ ಒಗ್ಗಿಕೊಂಡು ಖಾಯಂ ಆಗಿ ನೆಲೆಯೂರುವ ನಿರ್ಧಾರಕ್ಕೆ ಬರುತ್ತಾರೆ. ಇದಕ್ಕೆ ಕಾರಣ ಇಲ್ಲಿನ ಹವಾಗುಣ, ಆಹಾರ ಪದ್ಧತಿ ಹಾಗೂ ಸೆಳೆಯುವ ಸಂಸ್ಕೃತಿ.

ರುವಾಂಡದಿಂದ ಭಾರತಕ್ಕೆ ಓದು ಮುಗಿಸಲು ಹಾಗೂ ಕೆಲಸ ಅರಸಲು ಬಂದ ಮಾರ್ಟಿನ್ ಹಟ್ಕಿಮನ್ ಅವರಿಗೂ ಬೆಂಗಳೂರು ಬಹಳ ಹಿಡಿಸಿದೆ. ಇಲ್ಲಿನ ಜೀವನವನ್ನು ಬಹಳ ಎಂಜಾಯ್ ಮಾಡುತ್ತಿರುವುದು ಈ ಮಾತಿಗೆ ಸಾಕ್ಷಿ ಎನ್ನುವಂತಿದೆ.

ಹೌದು. ಮಾರ್ಟಿನ್ ಹಟ್ಕಿಮನ್ ರುವಾಂಡದಿಂದ ಬೆಂಗಳೂರಿಗೆ ಬಂದವರು. ಅವರು ಬೆಳೆದಿದ್ದು ಕಾಂಗೊ ದೇಶದಲ್ಲಿ. ಪ್ರಾಥಮಿಕ ಶಿಕ್ಷಣ ರುವಾಂಡದಲ್ಲೇ. ಎಂಜಿನಿಯರಿಂಗ್ ಪದವಿ ಪಡೆಯುವುದಕ್ಕಾಗಿ ಮಾರ್ಟಿನ್ ಮೊದಲು ಪಂಜಾಬ್‌ನ ಜಲಂಧರ್‌ಗೆ ಬಂದರು. ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದ ಇವರು ಇಂಟರ್ನ್‌ಷಿಪ್ ಗಾಗಿ ಬೆಂಗಳೂರನ್ನು ಆಯ್ದುಕೊಂಡರು. ಈ ನಗರ ಅವರಿಗೆ ಬಹಳ ಹಿಡಿಸಿತು. ಸದ್ಯ ಬೆಂಗಳೂರಿನಲ್ಲೇ 'ಕ್ವಾಲಿಟಿ ಎಂಜಿನಿಯರ್' ಆಗಿ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ.

'ಎಂಜಿನಿಯರಿಂಗ್ ಪದವಿ ಮುಗಿದ ಮೇಲೆ ಇಂಟರ್ನ್‌ಷಿಪ್ ಮುಗಿಸಿಕೊಂಡು ಊರಿಗೆ ವಾಪಸ್ ಹೋದೆ. ರುವಾಂಡದ ನನ್ನ ಗೆಳತಿಯೊಬ್ಬಳು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು,'ಇಲ್ಲಿಂದ ವಾಪಸ್ ಹೋದದ್ದೇಕೆ?' ಎಂದು ಕೇಳಿದಳು. ಅಲ್ಲದೆ ಇಲ್ಲೇ ಉತ್ತಮ ಕೆಲಸವೊಂದನ್ನೂ ಹುಡುಕಿಕೊಟ್ಟಳು. ಹಾಗಾಗಿ ಮರಳಿ ಇಲ್ಲಿಗೇ ಬಂದೆ. ಇಲ್ಲಿನ ವಾತಾವರಣ ಚೆನ್ನಾಗಿದೆ. ಜನರ ಸಹಕಾರ ಅಂತೂ ಮರೆಯುವ ಹಾಗೇ ಇಲ್ಲ. ಹೀಗಾಗಿ ನನ್ನಂತೆ ಇಲ್ಲಿನ ಭಾಷೆ, ಸಂಸ್ಕೃತಿ ಏನೊಂದೂ ಅರಿಯದ ವಿದೇಶೀಯರಿಗೆ ಬೆಂಗಳೂರು ನಿಜಕ್ಕೂ ಸ್ವರ್ಗ ಎನಿಸುತ್ತದೆ' ಎಂದು ಇಲ್ಲಿನ ಜನರನ್ನು ಕೊಂಡಾಡುತ್ತಾರೆ ಮಾರ್ಟಿನ್.

ಇಲ್ಲಿನ ಜನರ ಸಹಾಯಹಸ್ತ ಗುಣವನ್ನು ಮೆಚ್ಚುವ ಮಾರ್ಟಿನ್, 'ಭಾರತದಲ್ಲಿ ಕಳೆದ ವರ್ಷ ನವೆಂಬರ್‌ನಲ್ಲಿ ನೋಟು ಅಮಾನ್ಯೀಕರಣ (ಡಿಮಾನಿಟೈಸೇಷನ್) ಆದಾಗ ನನ್ನಲ್ಲಿ 500 ಮತ್ತು 1000 ರೂಪಾಯಿಗಳ ನೋಟುಗಳು ಮಾತ್ರವೇ ಇದ್ದವು. 100, 50ರ ನೋಟುಗಳೇ ಇರಲಿಲ್ಲ. ಯಾವ ಹೋಟೆಲ್, ಅಂಗಡಿ, ಮಾಲ್‌ಗಳಿಗೆ ಹೋದರೂ ದೊಡ್ಡ ಮುಖಬೆಲೆಯ ನೋಟುಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಬಹಳಷ್ಟು ಪಾಡು ಪಟ್ಟೆ. ಆಗ ನನ್ನ ಇಲ್ಲಿನ ಸ್ನೇಹಿತರು ಬಹಳ ಸಹಾಯ ಮಾಡಿದರು. ಇದನ್ನು ಮರೆಯುವಂತೆಯೇ ಇಲ್ಲ.' ಎಂದು ತನ್ನ ಕಷ್ಟದ ದಿನಗಳಲ್ಲಿ ಇಲ್ಲಿನವರು ಮಾಡಿದ ಸಹಾಯವನ್ನು ನೆನೆಯುತ್ತಾರೆ.

'ಮನೆ ನಿರ್ಮಾಣ ಕಂಪೆನಿಯಲ್ಲಿ ಕ್ವಾಲಿಟಿ ಎಂಜಿನಿಯರ್ ಆಗಿರುವುದರಿಂದ ನನಗೆ ಫೀಲ್ಡ್ ವರ್ಕ್ ತುಂಬ ಇರುತ್ತದೆ. ಇಡೀ ನಗರವನ್ನು ಸುತ್ತ ಬೇಕಾಗುತ್ತದೆ. ಇದರಿಂದ ಹಲವಾರು ವಿಷಯಗಳನ್ನು ಕಲಿಯುವಂತಾಗುತ್ತದೆ. ಹೊಸ ಹೊಸ ಜಾಗ ನೋಡುವಂತಾಗುತ್ತದೆ. ಇದು ಹೊಸ ಹೊಸ ಅನುಭವವನ್ನೂ ನೀಡುತ್ತದೆ. ಆದರೆ ನಗರದಲ್ಲಿನ ಟ್ರಾಫಿಕ್ ಮಾತ್ರ ಬಹಳ ಕಿರಿಕಿರಿ ಎನಿಸುತ್ತದೆ. ಆದರೂ ನನ್ನ ವೃತ್ತಿಯನ್ನು ಬಹಳ ಪ್ರೀತಿಸುತ್ತೇನೆ, ಖುಷಿ ಪಡುತ್ತೇನೆ. ಈ ವೃತ್ತಿ ಬಹಳ ಸಂತೃಪ್ತಿ ನೀಡಿದೆ' ಎಂದು ತನ್ನ ಕೆಲಸದ ಅನುಭವಗಳನ್ನು ಹಂಚಿಕೊಳ್ಳುತ್ತಾರೆ ಇವರು.

ಇಲ್ಲಿನ ಜೀವನಶೈಲಿ ವಿದೇಶೀಯರಿಗೆ ಇಷ್ಟವಾಗುವಂತಿದೆ. ಪಬ್, ಹೋಟೆಲ್, ಲಕ್ಷುರಿ ರೆಸ್ಟೋರೆಂಟ್‌ಗಳು ಎಲ್ಲವೂ ಚೆನ್ನಾಗಿವೆ. ಬೇಸರ



ರುವಾಂಡದಿಂದ ಬಂದ ಮಾರ್ಟಿನ್ ಹಟ್ಕಿಮನ್

ಕಳೆಯಲು ಪಬ್‌ಗಳು ಒಳ್ಳೆಯ ತಾಣ. ಊಟ ತಿಂಡಿ ವೈವಿಧ್ಯಗಳಂತೂ ವರ್ಣಿಸಲಾಗದಷ್ಟು ಚೆನ್ನಾಗಿದೆ. ಹೆಚ್ಚಿನ ಎಲ್ಲ ತಿಂಡಿ ತಿನಿಸುಗಳ ರುಚಿ ನೋಡಿದ್ದೇನೆ. ಮಾಂಸಾಹಾರದಲ್ಲೂ ಸಾಕಷ್ಟು ವೆರೈಟಿಗಳಿದ್ದು ಎಲ್ಲ ದೇಶಗಳ ತಿಂಡಿಗಳೂ ಇಲ್ಲಿ ಸಿಗುತ್ತವೆ. ಪರೋಟ, ಪಂಜಾಬಿ ಥಾಲಿ, ಬಿರಿಯಾನಿ ಬಹಳ ಇಷ್ಟಪಡುತ್ತೇನೆ. ಪಾಸ್ತ, ನೂಡಲ್ಸ್, ಚೈನೀಸ್ ಫಾಸ್ಟ್‌ಫುಡ್, ಕಾಂಟಿನೆಂಟಲ್ ಫುಡ್, ಸೀಫುಡ್.. ಮುಂತಾದವು ಒಂದಕ್ಕಿಂತ ಒಂದು ರುಚಿ. ನಾಲಿಗೆ ಚಾಪಲ್ಯ ಇರುವವರಿಗೆ ಈ ಊರು ನಿಜಕ್ಕೂ ಸ್ವರ್ಗವೇ ಸರಿ' ಎಂದು ಹೇಳುತ್ತಾರೆ ಈ ಯುವಕ.

ಸ್ನೇಹಿತರನ್ನು ಭೇಟಿಯಾಗುವುದು, ಫುಟ್‌ಬಾಲ್ ಆಡುವುದು ಮಾರ್ಟಿನ್ ಅವರ ಪ್ರಿಯವಾದ ಹವ್ಯಾಸವಂತೆ. ವಾರಾಂತ್ಯದಲ್ಲಿ ಮಾಲ್‌ಗಳಲ್ಲಿ ಸಿನಿಮಾ ನೋಡುವುದು, ಆಟ ಆಡುವುದು, ಗೆಳೆಯರೊಂದಿಗೆ ಹರಟುವುದು ಮುಂತಾದವುಗಳಲ್ಲಿ ಮಗ್ನರಾಗಿರುತ್ತಾರಂತೆ.

'ಬಾಲಿವುಡ್ ಸಿನಿಮಾ 'ದಂಗಲ್' ಅನ್ನು ನೋಡಿ ಬಹಳ ಎಂಜಾಯ್ ಮಾಡಿದೆ ಎನ್ನುವ ಮಾರ್ಟಿನ್ 'ಐ ಲವ್ ದಿ ಆ್ಯಕ್ಟಿಂಗ್ ಆಫ್ 'ತ್ರೀ ಖಾನ್ಸ್'– ಸಲ್ಮಾನ್‌ಖಾನ್, ಅಮೀರ್ ಖಾನ್ ಹಾಗೂ ಶಾರುಕ್‌ಖಾನ್ ಅವರ ಅಭಿನಯ ಬಹಳ ಇಷ್ಟ' ಎಂದು ಹೇಳುತ್ತಾರೆ.

■ ಅವನೀಶ್